**ಎಚ್. ದಂಡಪ್ಪ**

# ಅಂಬೇಡ್ಕರ್ ಮತ್ತು ಕನ್ನಡ ಸಂವೇದನೆ

ಅಂಬೇಡ್ಕರ್ ಮಹಾನ್ ಸಂವಿಧಾನ ತಜ್ಞ, ಆರ್ಥಿಕ ತಜ್ಞ, ಸಾಮಾಜಿಕ ತತ್ವಗಳನ್ನು ಅರಿತ ಮಹಾಜ್ಞಾನಿ. ಧರ್ಮ, ತತ್ವಶಾಸ್ತ್ರ, ಕಾನೂನು, ತರ್ಕ ಇತ್ಯಾದಿಗಳನ್ನು ಚೆನ್ನಾಗಿ ಅರಿತುಕೊಂಡವರು. ದೇಶದ ಆರ್ಥಿಕ ಸಾಮಾಜಿಕ, ರಾಜಕೀಯ ಒಟ್ಟಾರೆ ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅರಿತು, ಅವುಗಳಲ್ಲಿರುವ ಲೋಪ ದೋಷಗಳನ್ನು ಗುರುತಿಸಿ, ಅವುಗಳನ್ನು ಉತ್ತಮಪಡಿಸಿ ಜನರ ಸ್ಥಿತಿಗತಿಗಳನ್ನು ಸುಧಾರಿಸುವಂತಹ ಪರಿಹಾರೋಪಾಯಗಳನ್ನು ಹುಡುಕಿದವರು. ಅವರ ಬರವಣಿಗೆಗಳಲ್ಲಿ ಭಾರತೀಯ ಸಮಾಜದ ಸ್ವರೂಪ. ಸಮಾಜದ ಸಮಸ್ಯೆಗಳು ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ, ಮಾನವೀಯ ಮೌಲ್ಯಗಳ ಕೊರತೆ, ಸಮಾನತೆ, ಸಹಬಾಳ್ವೆ, ಸಹೋದರತ್ವ ಎಂಬ ಭಾವನೆಗಳ ಕೊರತೆ ಇತ್ಯಾದಿಗಳ ಬಗ್ಗೆ ಅಂಬೇಡ್ಕರ್ ಯೋಚಿಸಿದಷ್ಟು ಭಾರತೀಯ ಚಿಂತಕರಲ್ಲಿ ಯಾರೂ ಯೋಚಿಸಲಿಲ್ಲವೆನ್ನಬಹುದು. ಪಿರಮಿಡ್ಡಿನ ರೂಪದಲ್ಲಿರುವ ಶ್ರೇಣೀಕರಣದ ಸಾಮಾಜಿಕ ವ್ಯವಸ್ಥೆಯನ್ನು ಚಪ್ಪಟೆಯಾಕಾರದ ರೂಪಕ್ಕೆ ತರಬೇಕು ಎಂಬುದು ಅಂಬೇಡ್ಕರ್ ಆಶಯವಾಗಿತ್ತು. ಸಾಮಾಜಿಕವಾಗಿ ಕೆಳಹಂತದಲ್ಲಿರುವವರು ಮೇಲಿನ ಹಂತದವರೊಂದಿಗೆ ಸರಿಸಮಾನವಾಗಿ ಬೆರೆಯಬೇಕು—ಆಗ ಸಮಾನತೆಯ ಸಮಾಜ ನಿರ್ಮಾಣವಾಗುತ್ತದೆ ಎಂದು ಭಾವಿಸಿ ಅದಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿದರು.